

## ಬದುಕಿಗೆ ಆತ್ಮವಿಶ್ವಾಸ ಹಾಗೂ ಭರವಸೆ

**-ಡಾ. ಮಲ್ಲಯ್ಯ ಸಂಡೂರು**, ಅಧ್ಯಾಪಕ, ಲೇಖಕ



**ನನ್ನ ಸಂವಿಧಾನ**

ಭಾರತದಲ್ಲಿ ಸಂವಿಧಾನವೇ ಸರ್ವೋಚ್ಚವಾದುದು. ನಮ್ಮ ಸಂವಿಧಾನದ ಮೂಲ ತತ್ವಗಳು, ಆಶಯಗಳು ಮತ್ತು ಸಿದ್ಧಾಂತಗಳನ್ನು, ಸಂವಿಧಾನದ ಪ್ರಸ್ತಾವನೆಯನ್ನು ಪ್ರತಿ ಭಾರತೀಯರೂ ಅರ್ಥೈಸಿಕೊಳ್ಳಬೇಕು.

ಪ್ರಜಾಪ್ರಭುತ್ವದ ಮೌಲ್ಯಗಳಾದ ಸಮತೆ, ಸಮಾನತೆ, ಸ್ವಾತಂತ್ರ್ಯ, ಭ್ರಾತೃತ್ವ, ಮತ ನಿರಪೇಕ್ಷತೆ, ಸಾರ್ವಭೌಮ, ಜಾತ್ಯತೀತತೆಯಿಂದ ರೂಪಿತವಾದ ಶೈಕ್ಷಣಿಕ ನಾಯಕತ್ವ ಗುಣಾತ್ಮಕ ಶಿಕ್ಷಣಕ್ಕೆ ಬುನಾದಿಯಾಗಿದೆ.

ಶಿಕ್ಷಣ ವಂಚಿತನಾಗುವ ಸಮಯದಲ್ಲಿ ನನಗೆ ಶಿಕ್ಷಣವನ್ನು ನೀಡಿದ ಸಂವಿಧಾನಕ್ಕೆ ನಾನು ಚಿರಋಣಿ. ಅದನ್ನು ಅನುಸರಿಸುವ ಬದ್ಧತೆ ನನಗಿದೆ. ಪ್ರಾಥಮಿಕ ಶಿಕ್ಷಣದಿಂದ ಹಿಡಿದು ವಿಶ್ವವಿದ್ಯಾಲಯಗಳಲ್ಲಿ ಸ್ನಾತಕೋತ್ತರ ಪದವಿ, ಎಂ.ಫಿಲ್, ಪಿಎಚ್‌ಡಿ. ಪದವಿ ಪಡೆದು; ವಿಶ್ವವಿದ್ಯಾಲಯದಲ್ಲಿ ಅಧ್ಯಾಪಕನಾಗಿ ಕೆಲಸ ಮಾಡುತ್ತಿರುವುದಕ್ಕೆ ಬಾಬಾ ಸಾಹೇಬ್ ಡಾ. ಅಂಬೇಡ್ಕರ್ ಅವರ ಸಂವಿಧಾನವೇ ಕಾರಣ ಎಂದು ಹೆಮ್ಮೆಯಿಂದ ಹೇಳಿಕೊಳ್ಳುವೆ. ಭಾರತ ದೇಶದ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಮತದಾನ ಮಾಡಲು ಅವಕಾಶ ನೀಡಿದ್ದು ಸಂವಿಧಾನ. ಹೀಗಾಗಿ ಅದನ್ನು ಬೋಧಿಸುವ ಅವಕಾಶವೂ ನನಗೆ ನೀಡಿದೆ.

ಅಂಬೇಡ್ಕರ್ ಎಂದರೆ ಉಸಿರು; ಸಂವಿಧಾನ ಎಂದರೆ ಶಕ್ತಿ. ಸಂವಿಧಾನ ನನ್ನ ಬದುಕಿನ ಮತ್ತು ನನ್ನಂತಹ ಎಷ್ಟೋ ಶೋಷಿತರ ಬಾಳಿನ ಬೆಳಕಾಗಿದೆ. ಸ್ವಾತಂತ್ರ್ಯ, ಸಮಾನತೆ ಹಾಗೂ ಭ್ರಾತೃತ್ವ ಭಾವಗಳ ಮೂಲಕ ಪ್ರತಿ ಪ್ರಜೆಗೂ ಸಮಾನ ಸ್ಥಾನ ಹಾಗೂ ಸಮಾನ ಅವಕಾಶಗಳನ್ನು ಕಲ್ಪಿಸುವ ದೂರದೃಷ್ಟಿತ್ವ ಹೊಂದಿರುವ ಸಂವಿಧಾನ ನನ್ನ ಜೀವನ ವಿಧಾನವನ್ನು ಬದಲಿಸಿದೆ. ನನ್ನ ಬದುಕಿಗೆ ಆತ್ಮವಿಶ್ವಾಸ ಹಾಗೂ ಭರವಸೆ ಮೂಡಿಸಿದೆ.

## ಆಹಾರ ಸಂಸ್ಕೃತಿಯ ಪೋಷಕ

**-ಹರೀಶ್ ಬಾನಗೊಂದಿ**, ಪರಿಸರವಾದಿ



**ನನ್ನ ಸಂವಿಧಾನ**

ಸಂವಿಧಾನ ಇಲ್ಲದೇ ಇದ್ದರೆ ಭಾರತ ಎನ್ನುವುದು ಇರುತ್ತಿರಲಿಲ್ಲ. ಬಹುಸಂಸ್ಕೃತಿಯ ಜನರಿಗೆ ಬದುಕುವ ಅವಕಾಶ ಕೊಟ್ಟಿದ್ದು ಅದೇ ಸಂವಿಧಾನ. ಸಮಾಜದ ಪ್ರತಿಯೊಂದು ಆಯಾಮವನ್ನು ಸ್ಪರ್ಶಿಸುವ ಅದು ಪರಿಸರದ ಉಳಿವು ಮತ್ತು ಸಂರಕ್ಷಣೆಯನ್ನು ಮಾಡುತ್ತಿದೆ.

ಹಂದಿಮಾಂಸ ನನಗೆ ತುಂಬ ಪ್ರೀತಿ. ತಲೆಮಾರುಗಳಿಂದ ಅದನ್ನು ತಿಂದು ನಾವು ಬೆಳೆದಿದ್ದೇವೆ. ನಮ್ಮ ತಾತಂದಿರ ಕಾಲದಲ್ಲಿ ಬೇಟೆಯಾಡುತ್ತಿದ್ದರು. ಹಾಸನ ಜಿಲ್ಲೆಯ ಅರಕಲಗೂಡು ತಾಲ್ಲೂಕಿನ ಬಾನಗೊಂದಿ ನಮ್ಮೂರು. ಸಂಕ್ರಾಂತಿ ಹಬ್ಬದ ದಿನ ಅದನ್ನೇ ಸಂಭ್ರಮಿಸಿ ಸವಿಯುತ್ತೇವೆ. ನಮ್ಮೂರಲ್ಲಿ ಒಕ್ಕಲಿಗರು ಮಾತ್ರ ಇಲ್ಲ. ಕುರುಬರು, ಆಗಸರು, ಪರಿಶಿಷ್ಟರು ಸೇರಿ ಅನೇಕ ಸಮುದಾಯಗಳಿವೆ. ಅವರೆಲ್ಲ ಒಟ್ಟಾಗಿ ಸಂಕ್ರಾಂತಿಯ ದಿನ ಗುಡ್ಡೆ ಮಾಂಸದ ಪಾಲು ಹಾಕುತ್ತಿದ್ದರು. ಈಗ ಅದನ್ನು ಕೀಳಾಗಿ ಕಾಣುವ, ಅಪಹಾಸ್ಯ ಮಾಡುವ ಪ್ರವೃತ್ತಿ ಅಲ್ಲಲ್ಲಿ ಕಾಣಿಸುತ್ತದೆ. ಅದರ ನಿಯಂತ್ರಣಕ್ಕೂ ಒಂದು ಶಕ್ತಿ ತುಡಿಯುತ್ತಿದೆ. ಅದನ್ನು ಮೀರಿ ನಾವು ಮುಕ್ತವಾಗಿ ನಮ್ಮ ಆಹಾರ ಸಂಸ್ಕೃತಿಯನ್ನು ಉಳಿಸಿಕೊಳ್ಳಲು ಹೆಮ್ಮೆಯಿಂದ ಅದನ್ನು ಅನುಭವಿಸುವ ಹಕ್ಕನ್ನು ಸಂವಿಧಾನ ನೀಡಿದೆ. ಇದನ್ನೆಲ್ಲ ಮಾತನಾಡಲು ಸಾಧ್ಯ ಆಗಿರುವುದೂ ಸಂವಿಧಾನದಿಂದಲೇ. ಅದನ್ನು ಗೌರವಿಸುವ ಮತ್ತು ರಕ್ಷಿಸುವ ಜವಾಬ್ದಾರಿ ನಮ್ಮ ಮೇಲಿದೆ.

ಉನ್ನತ ಸ್ಥಾನಕ್ಕೇರುವ ಅವಕಾಶವನ್ನು ಒದಗಿಸಿರುವ ಸಂವಿಧಾನದ ಶಕ್ತಿಯನ್ನು ಸೂಚಿಸುವಂತಿದ್ದರೆ, ಮನುಷ್ಯ ಮನುಷ್ಯನಾಗಿ ಉಳಿಯಲು ಅಗತ್ಯವಾದ ನೀತಿಸಂಹಿತೆ ರೂಪದಲ್ಲಿರುವ ಸಂವಿಧಾನ ಮಾನವೀಯ ಮೌಲ್ಯಗಳ ಸಂಕಥನವೂ ಆಗಿರುವುದಕ್ಕೆ ನಿದರ್ಶನವಾಗಿ ಎರಡನೇ ಘಟನೆಯನ್ನು ಗಮನಿಸಬಹುದು. ನಮ್ಮ ಮುಖ್ಯಮಂತ್ರಿ, ರಾಷ್ಟ್ರಪತಿ ಹಾಗೂ ಪ್ರಧಾನಮಂತ್ರಿಗಳೇ ಎಲ್ಲರನ್ನೂ ಒಳಗೊಳ್ಳುವ, ಎಲ್ಲರಿಗೂ ಸಮಾನ ಅವಕಾಶಗಳನ್ನು ಕಲ್ಪಿಸುವ ಸಂವಿಧಾನದ ಅನನ್ಯ ಶಕ್ತಿಯ ಬಹುದೊಡ್ಡ ಫಲಾನುಭವಿಗಳಾಗಿದ್ದಾರೆ.

ಸಂವಿಧಾನ ಎನ್ನುವುದು ವಕೀಲರಿಗೆ ಒದಗಿಬರುವ ಕಾನೂನು ಕಟ್ಟಳೆಗಳ ಕಟ್ಟಷ್ಟೇ ಅಲ್ಲ ಎನ್ನುತ್ತಾರೆ ಬಿ.ಆರ್. ಅಂಬೇಡ್ಕರ್. ಹಾಗಾದರೆ, ಸಂವಿಧಾನವೆಂದರೆ ಏನು? ‘ಸಂವಿಧಾನ ಜೀವನದ ವಾಹನ. ಪ್ರಜಾಪ್ರಭುತ್ವವನ್ನು ವಿನ್ಯಾಸದ ರೂಪದಲ್ಲಿ ಮಾತ್ರವಲ್ಲದೆ ವಾಸ್ತವವಾಗಿಯೂ ರೂಪಿಸಿಕೊಳ್ಳಲು ನಾಗರಿಕರು ಬಯಸಿದರೆ, ತಮ್ಮ ಸಾಮಾಜಿಕ ಮತ್ತು ಆರ್ಥಿಕ ಗುರಿಗಳನ್ನು ಸಾಧಿಸಿಕೊಳ್ಳಲು ಸಂವಿಧಾನದ ಮಾರ್ಗವನ್ನು ಅನುಸರಿಸಬೇಕು’ ಎನ್ನುವ ಬಾಬಾ ಸಾಹೇಬರ ಮಾತು, ಸಂವಿಧಾನಕ್ಕೂ ನಮ್ಮ ಬದುಕಿಗೂ